ಸಾಕ್ಷಿಯನ್ನು ದಿನಾಂಕ 16-09-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದಿದಾರರ ಪರವಾಗಿ ಶ್ರೀ ಕೆ.ಬಿ.ವಿ. ವಕೀಲರಿಂದಃ**

ಪ್ರಸ್ತುತ ಪ್ರಕರಣಕ್ಕೂ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದಿಯನ್ನು ಓದಿ ನೋಡಿದ್ದು, ಅದರಲ್ಲಿರುವ ವಿಚಾರಗಳು ಸರಿಯಾಗಿರುತ್ತವೆ.

ನಿಪಿ-1 ಚೆಕ್ಕು ನನ್ನದಾಗಿರುತ್ತದೆ. ನಿಪಿ-1 ರಲ್ಲಿರುವ ಸಹಿಯು ಮಾತ್ರ ನನ್ನದಾಗಿರುತ್ತದೆ. ನನಗೂ ಹಾಗೂ ನಮ್ಮ ಅಂಚೆ ಇಲಾಖೆಯ ನೌಕರರಿಗೂ ಯಾವುದೇ ವೈರತ್ವ ಇರುವುದಿಲ್ಲ. ನನ್ನ ವಿಳಾಸಕ್ಕೆ ಬಂದ ಎಲ್ಲಾ ಪತ್ರಗಳನ್ನು ಅಂಚೆ ಇಲಾಖೆಯವರು ನನಗೆ ನೀಡುತ್ತಾರೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು, ಅಲ್ಲಿ ನಡೆದ ವಿಚಾರಗಳೇ ಆಗಿರುತ್ತವೆ.

ಸಾಮಾನ್ಯವಾಗಿ ಪೊಲೀಸರಿಗೆ ದೂರನ್ನು ನೀಡುವಾಗ ಲಿಖಿತ ರೂಪದಲ್ಲಿ ನೀಡಬೇಕು ಎಂದರೆ ಸರಿ.

ನನ್ನ ಹಾಗೂ ಪಿರ್ಯಾದಿದಾರರ ನಡುವೆ ಆದ ವ್ಯವಹಾರದ ಬಗ್ಗೆ ನನ್ನಲ್ಲಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮಲ್ಲಿಕಾ, ಪೂರ್ಣಿಮಾ ಹಾಗೂ ಠಾಣಾಧಿಕಾರಿಗಳನ್ನು ಸಾಕ್ಷಿದಾರರನ್ನಾಗಿ ಮಾಡುತ್ತೀರಾ ಎಂದರೆ ಸಾಕ್ಷಿಯು ಅವರು ಈಗ ಎಲ್ಲಿದ್ದಾರೆ ಎಂದು ನನಗೆ ತಿಳಿದಿರುವುದಿಲ್ಲವಾದ್ದರಿಂದ ಅವರನ್ನು ನಾನು ಸಾಕ್ಷಿದಾರರನ್ನಾಗಿ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಮಲ್ಲಿಕಾ ಹಾಗೂ ಪೂರ್ಣಿಮಾರವರು ಈಗ ಎಲ್ಲೂ ಇಲ್ಲ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣೆಯ 2 ನೇ ಪುಟದ ಪ್ಯಾರಾ ನಂಬ್ರ 2 ರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿರುತ್ತವೆ. ಪಿರ್ಯಾದಿದರರು ನನಗೆ ಬೆದರಿಕೆ ಒಡ್ಡಿದ್ದಾರೆ ಎಂದು ಹೇಳಲಾದ ಬಗ್ಗೆ ನಾನು ಪೊಲೀಸರಿಗೆ ಪಿರ್ಯಾದಿದಾರರ ವಿರುದ್ಧ ಪೊಲೀಸು ದೂರನ್ನು ನೀಡಿರುವುದಿಲ್ಲ. ಸಾಮಾನ್ಯವಾಗಿ ಯಾರಾದರೂ ಬೆದರಿಕೆ ಒಡ್ಡಿದ ಪಕ್ಷದಲ್ಲಿ ಪೊಲೀಸರು ದೂರನ್ನು ನೀಡುತ್ತಾರೆ ಎಂದರೆ ಸರಿ. ಪಿರ್ಯಾದಿದಾರರು ನನಗೆ ಬೆದರಿಕೆ ಒಡ್ಡಿದ ಬಗ್ಗೆ ನಾನು ನನ್ನ ವಕೀಲರಿಗೆ ಹೇಳಿರುತ್ತೇನೆ. ನನ್ನ ವಕೀಲರು ಪಿರ್ಯಾದಿದಾರರ ವಿರುದ್ಧ

ಪೊಲೀಸು ದೂರನ್ನು ಸಲ್ಲಿಸಬೇಕೆಂದು ನನಗೆ ಸಲಹೆಯನ್ನು ನೀಡಿರುತ್ತಾರಾ ಎಂದರೆ ಸಾಕ್ಷಿಯು ಈಗ ಬಹಳಷ್ಟು ವರ್ಷವಾಗಿರುತ್ತದೆ ಎಂದು ನುಡಿಯುತ್ತಾರೆ.

ದಿನಾಂಕ 29-09-2020 ನಾನು ಉಡುಪಿಯ ಸೈಬರ್ ಠಾಣೆಗೆ ಹೋದಾಗ ಅಲ್ಲಿ ರಾಮಚಂದ್ರನಾಯಕ್ ರವರು ನನಗೆ ಬೆದರಿಕೆ ಒಡ್ಡಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಪೂರ್ಣಿಮಾ, ಮಲ್ಲಿಕಾ ಹಾಗೂ ರಾಮಚಂದ್ರ ನಾಯಕ್ ರವರು ಎಲ್ಲಿದ್ದಾರೆಂದು ಹುಡುಕುವ ಪ್ರಯತ್ನವನ್ನು ಈಗ ಮಾಡಿರುವುದಿಲ್ಲ. ಸದರಿ ಪೂರ್ಣಿಮಾ ಹಾಗೂ ಮಲ್ಲಿಕಾರವರು ಪಿರ್ಯಾದಿದಾರರ ಸಂಪರ್ಕದಲ್ಲಿ ಇದ್ದಾರೆ ಎಂದು ಸದರಿ ಪೂರ್ಣಿಮಾರವರ ಸಂಬಂಧಿಕರು ನನಗೆ ತಿಳಿಸಿರುತ್ತಾರೆ. ನಾನು ಈ ರೀತಿಯಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿರ್ಯಾದಿದಾರರು ಈ ಪ್ರಕರಣವನ್ನು ದಾಖಲು ಮಾಡಿದ ನಂತರವಾದರೂ ಪಿರ್ಯಾದಿದಾರರ ವಿರುದ್ಧ ಪೊಲೀಸು ದೂರನ್ನು ಸಲ್ಲಿಸಿರುವುದಿಲ್ಲ. ಹಾಗೆ ಪೊಲೀಸು ದೂರನ್ನು ನೀಡಲು ಆಕ್ಷೇಪ ಇದ್ದಿರಲಿಲ್ಲ. ನಾನು ಪಿರ್ಯಾದಿದಾರರಿಗೆ ಯಾವುದೇ ಹಣವನ್ನು ಕೊಡಲು ಇದ್ದಿರುವುದಿಲ್ಲ. ಆದ್ದರಿಂದ ಅವರ ವಿರುದ್ಧ ಪೊಲೀಸು ದೂರನ್ನು ನೀಡಬೇಕೆಂದು ನಾನು ನನ್ನ ವಕೀಲರಲ್ಲಿ ಹೇಳಿರುವುದಿಲ್ಲ.

ಪಿರ್ಯಾದಿದಾರರಿಂದ ನಾನು ರೂ.7,00,000-00 ಸಾಲವನ್ನು ಪಡೆದುಕೊಂಡಿದ್ದು ಅದನ್ನು ಮರುಪಾವತಿಸುವುದಕ್ಕಾಗಿ ನಿಪಿ-1 ರ ಒಂದು ಚೆಕ್ಕನ್ನು

ಅವರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇದ್ದಿರಲಿಲ್ಲ ಎಂದರೆ ಸರಿ.

**ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಅದರಂತೆ ಅನುಮತಿಸಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸುಳ್ಯ.ದ.ಕ.